(ಅ) ಇದೆ.

(ಆ) ಕಾಮಗಾರಿಗಳಿಗೆ ಅಂದಾಜು ಮೊತ್ತದ ಶೇ.30 ರಷ್ಟು ಅನುದಾನ ಲಭ್ಯವಾದಲ್ಲಿ, ಆರ್ಥಿಕ ಹಾಗೂ ತಾಂತ್ರಿಕ ಶಕ್ಯತೆಯನ್ನು ಪರಿಗಣಿಸಿ, ಅಂದಾಜಿಗೆ ಅನುಮೋದನೆಯಾದ ನಂತರ ಕೆಲಸ ಪ್ರಾರಂಭಿಸಲಾಗುವುದು.

ತೂಬಿನ ಕೆರೆ ನಿರ್ಮಾಣದ ಅಂದಾಜು ಮೊತ್ತ ರೂ. 44.70 ಲಕ್ಷಗಳು (93-94ನೇ ಸಾಲಿನ ದರಗಳ ಪಟ್ಟಿಯಂತೆ).

ತಗ್ಗಿಕುಪ್ಪೆ ಕೆರೆ ಅಂದಾಜು ಮೊತ್ತ ರೂ. 23.00 ಲಕ್ಷಗಳು (93-94ನೇ ಸಾಲಿನ ದರಗಳ ಪಟ್ಟಿಯಂತೆ).

ಈ ಕಾಮಗಾರಿಗಳ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಬೀದರ್ ತಾಲ್ಲೂಕಿನ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು.

200(596): ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ)

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೀದರ್ ತಾಲ್ಲೂಕು ಸೈದಾಪುರ, ವಟ್ಟಗಾವ, ಹೊನ್ನಳ್ಳಿ, ರಾಜನಾಳ ಹಾಗೂ ಭಾಲ್ಕಿ ತಾಲ್ಲೂಕು ಗಿಲಿಗಿಲಿ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಸಮೀಕ್ಷೆ ನಡೆಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಸಮೀಕ್ಷೆ ನಡೆಸಲು ಸರ್ಕಾರವು ಆದೇಶ ನೀಡುತ್ತದೆಯೇ;

(ಇ) ಹಾಗಿದ್ದಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಕಳೆದ ವರ್ಷ ಹಣವನ್ನು ಮಂಜೂರು ಮಾಡಿದ್ದು ನಿಜವಲ್ಲವೇ;

(ಈ) 1997-98ನೇ ಸಾಲಿನಲ್ಲಿ ಈ ಎಲ್ಲಾ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಸರ್ಕಾರವು ಕೈಗೊಳ್ಳುವುದೇ;

(ಉ) ನಬಾರ್ಡ್‌ನಿಂದ ಮೇಲ್ಕಂಡ ನೀರಾವರಿ ಯೋಜನೆಗಳಿಗೆ ಹಣವನ್ನು ಪಡೆಯಲು ಸರ್ಕಾರವು ಕ್ರಮ ಕೈಗೊಂಡಿದೆಯೇ;

ಶ್ರೀ ತಿಪ್ಪೇಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಆ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳು 1996-97ರ ಆಯವ್ಯಯದಲ್ಲಿ ಸೇರ್ಪಡೆಯಾಗಿದೆ. ಅವುಗಳಲ್ಲಿ ಹೊನ್ನಳ್ಳಿ, ಹೊಸ ಕೆರೆಯ ಕಾಮಗಾರಿಯನ್ನು ನಬಾರ್ಡ್ ಸಹಾಯ ಧನದೊಂದಿಗೆ ಕೈಗೆತ್ತಿ ಕೊಳ್ಳಲಾಗಿದ್ದು ಈ ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ ಕಾಮಗಾರಿಗಳ ಸಮೀಕ್ಷೆ ನಡೆಸಲಾಗುತ್ತಿದೆ.

(ಆ) ಸದರಿ ಸಣ್ಣ ನೀರಾವರಿ ಯೋಜನೆಗಳಿಗೆ 1995-96ನೇ ಸಾಲಿನಲ್ಲಿ ಅನುದಾನ ಈ ಕೆಳಗಿನಂತೆ ನೀಡಲಾಗಿತ್ತು.

ಕ್ರಸಂ	ಕೆಲಸದ ಹೆಸರು	1995-96 ಅನುದಾನ
1)	ಹೊನ್ನಳ್ಳಿ ಕೆರೆ	ರೂ.1.00 ಲಕ್ಷಗಳು
2)	ರಾಜನಾಳ ಕೆರೆ	ರೂ.5.99 ಲಕ್ಷಗಳು
3)	ಗಿಲಿಗಿಲಿ ಏತ ನೀರಾವರಿ ಯೋಜನೆ	ರೂ. - ಇಲ್ಲ -
4)	ಸೈದಾಪುರ ಕೆರೆ	ರೂ.24.00 ಲಕ್ಷಗಳು
5)	ವಟ್ಟಗಾಂವ (ವಡ್ಡರಗಾ ಕೆರೆ)	ರೂ. - ಇಲ್ಲ -

(ಇ) ಈ ನಾಲ್ಕು ಸಣ್ಣ ನೀರಾವರಿ ಕಾಮಗಾರಿಗಳ ಸಮೀಕ್ಷೆ ನಡೆದ ನಂತರ ತಾಂತ್ರಿಕವಾಗಿ ಶಕ್ಯರಾದಲ್ಲಿ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

(ಈ) ಹೊನ್ನಳ್ಳಿ ಹೊಸ ಕೆರೆಯನ್ನು ನಬಾರ್ಡ್ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಉಳಿದ ಸಮೀಕ್ಷೆಯಾದ ನಂತರ ತಾಂತ್ರಿಕವಾಗಿ ಶಕ್ಯವಾದಲ್ಲಿ ಈ ಕಾಮಗಾರಿಗಳಿಗೆ ನಬಾರ್ಡ್‌ನಿಂದ ಸಹಾಯ ಪಡೆಯಲು ಯೋಚಿಸಲಾಗುವುದು.

ಬೀದರ್ ಜಿಲ್ಲೆಯ ಬೋಸ್ಗಾ ಗ್ರಾಮದಲ್ಲಿ 33 ಕೆ.ವಿ ಪವರ್ ಸ್ಟೇಷನ್ ಸ್ಥಾಪನೆ

201(597) ಶ್ರೀ. ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೀದರ್ ಜಿಲ್ಲೆಯ ಬೋಸ್ಗಾ ಗ್ರಾಮದಲ್ಲಿ 33 ಕೆ.ವಿ. ಪವರ್ ಸ್ಟೇಷನ್ ಮಂಜೂರು ಮಾಡಲಾಗಿದೆಯೇ;

(ಆ) ಈ ಬಗ್ಗೆ ಈಗಾಗಲೇ ಸಮೀಕ್ಷೆ ನಡೆಸಿದ್ದು ಈ ವಿದ್ಯುತ್ ಸ್ಟೇಷನ್ ಮಂಜೂರು ಮಾಡಿದಲ್ಲಿ ಸುಮಾರು 50 ಹಳ್ಳಿಗಳಿಗೆ ಪ್ರಯೋಜನವಾಗುವುದೇ?

ಶ್ರೀ. ಶರಣ ಬಸಪ್ಪದರ್ಶನಾಪುರ (ಇಂಧನ ರಾಜ್ಯ ಸಚಿವರು)

(ಅ) ಇಲ್ಲ

(ಆ) ಪ್ರಸ್ತುತ ಯಾವುದೇ ಸಮೀಕ್ಷೆಯನ್ನು ಮಾಡಿರುವುದಿಲ್ಲ ಮತ್ತು ಈ ಗ್ರಾಮದಲ್ಲಿ ಒಂದು ಸ್ಟೇಷನ್‌ನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಇರುವುದಿಲ್ಲ.

(ಇ) ಉದ್ಭವಿಸುವುದಿಲ್ಲ.